೧-೦೦ ಪಿ.ಎಂ.

## Karnataka Command Areas Development Bill, 1979-

*Motion to consider*

SRI K.H. SRINIVAS (Minister of State for Information and Youth ervices).--Sir I beg to move:--

"That the Karnataka Command Areas Development Bill, 1979, be taken into consideration."

*The question was proposed.*

ಶ್ರೀ ಕೆ.ಎಚ್. ಶ್ರೀನಿವಾಸ್ (ವಾರ್ತಾ ಹಾಗೂ ಯುವಜನ ಸೇವಾ ಸಚಿವರು).–ಮಾನ್ಯ ಅಧ್ಯಕ್ಷರೆ ಯವರೇ. ಈ ಕರ್ನಾಟಕ ಅಚ್ಚುಕಟ್ಟು ಪ್ರದೇಶದ ವಿಧೇಯಕ ಹಿಂದೆ ಎರಡು ಬಾರಿ ಈ ಸದನದ ಮುಂಣಿ ಬಂದಿತ್ತು. ೧೯೭೮ನೇ ಇಸವಿ ಆಗಸ್ಟ್ ತಿಂಗಳಿನಲ್ಲಿ, ಹಾಗೂ ೧೯೭೯ನೇ ಇಸವಿಯ ಜನವರಿ ತಿಂಗಳಿನಲ್ಲಿ ಈ ರೀತಿಈ ವಿಧೇಯಕ ಈ ಸಭೆಯ ಮುಂದೆ ಬಂದಿತ್ತು. ಆದರೆ ಆಗ ಕಾಲಾವಕಾಶ ಸಿಕ್ಕದೆ ಇದ್ದುದರಿಂದ ಮೊದಲು ಈ ಸದನದಲ್ಲಿ ಬಂದಾಗ ಇದನ್ನು ಪರಿಶೀಲನೆಗೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಎರಡು ಬಾರಿ ಬಂದಾಗ ಪರಿಶೀಲನೆಗೆ ತೆಗೆದು ಕೊಂಡರೂ ಕೂಡ ಅದನ್ನು ಪಾಸು ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಇದರಮೇಲೆ ಚರ್ಚೆ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಇದರ ಮೇಲೆ ಚರ್ಚೆ ಮಾಡುವುದಕ್ಕೆ ಕಾಲಾವಕಾಶ ಸಿಕ್ಕಲಿಲ್ಲ. ಆದರೆ ನಾನು ಈಗಾಗಲೇ ಮಾನ್ಯ ಸದಸ್ಯರು ಹಾಗೂ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ತಿಳಿಸಿ ದ್ದೇನೆ, ಈ ವಿಧೇಯಕವನ್ನು ಬಹಳ ತುರ್ತಾಗಿ ಜಾರಿಗೆ ಕೊಡಬೇಕು ಎಂದು. ಅವರು ಕೂಡ ಇದನ್ನು ಒಪ್ಪಿಕೊಂಡು ಸೂಚನೆ ಮಾಡಿ ಅಂಥಾ ಸಂದರ್ಭ ಇದ್ದರೆ ಅದನ್ನು ಸುಗ್ರೀವಾಜ್ಞೆ ಮೂಲಕ ಜಾರಿಗೆ ಕೊಡ ಬೇಕು ಮತ್ತು ತದನಂತರ ಅಧಿವೇಶನ ಸೇರಿದಾಗ ಇದನ್ನು ಪರಿಶೀಲನೆಗೆ ತೆಗೆದುಕೊಳ್ಳಬಹುದು ಎಂದು ತಮ್ಮ ಸಮಾಧಾನವನ್ನು ವ್ಯಕ್ತ ಮಾಡಿದ್ದಾರೆ ಈ ಪ್ರಕಾರ ನಾವು ೧೯೭೯ನೇ ಸಾಲಿನ ಏನೇ ಸುಗ್ರೀವಾಜ್ಞೆಯ ಮೂಲಕ ಈ ವಿಧೇಯಕವನ್ನು ಜಾರಿಗೆ ಕೊಟ್ಟಿದ್ದೇವೆ. ಆದರೆ ವಿಶೇಯಕದ ರೀತಿಯಲ್ಲಿ ಕಾರ್ಯಕ್ರಮಗಳು ಆಗಬೇಕಾಗಿರುವುದರಿಂದ ಈಗ ವಿಧಾನಸಭೆಯ ಅಧಿವೇಶನವನ್ನು ಕರೆದಿರುವುದರಿಂದ ಈಗ ಇಲ್ಲಿ ಈ ಸಭೆಯ ಮುಂದೆ ಸುಗ್ರೀವಾಜ್ಞೆಯ ಬದಲು ಈ ಒಂದು ವಿಧೇಯಕವನ್ನು ನಾವು ಇವೊತ್ತಿನ ದಿವಸ ಮುಂಡಿಸಿ ದ್ದೇವೆ. ಇದು ಮುಖ್ಯವಾಗಿ ನೀರಾವರಿ ಅಚ್ಚುಕಟ್ಟು ಪ್ರದೇಶದ ಅಭಿವೃದ್ಧಿಗೆ ಸಂಬಂಧಪಟ್ಟ ವಿಧೇಯಕ ಇದೆ. ಈ ಸದನದ ಮಾನ್ಯ ಸದಸ್ಯರಿಗೆ ಚೆನ್ನಾಗಿ ಗೊತ್ತಿದೆ. ಕಳೆದ ಕೆಲವು ವರ್ಷಗಳಿಂದ ಸರ್ಕಾರ ಮಾಡಿ ದಂತಹ ಅವಿರತ ಪ್ರಯತ್ನದಿಂದ ಈ ರಾಜ್ಯದಲ್ಲಿ ನೀರಾವರಿ ಸಾಮರ್ಥ್ಯ ಗಣನೀಯ ಪ್ರಮಾಣದಲ್ಲಿ ಹೆಚ್ಚಿಳ ಆಗಿದೆ ಎನ್ನುವುದು. ಆದರೆ ಒಂದು ಪರಿಸ್ಥಿತಿಯನ್ನು ನಾವು ತಾತ್ಕಾರ್ತಿಕವಾಗಿ ಗಮನಿಸಬೇಕಾದ್ದು ಏನು ಎಂದರೆ ನಾವು ಜಲಾಶಯಗಳನ್ನು ನಿರ್ಮಾಣ ಮಾಡಬಹುದು, ಕಾಲುವೆಗಳನ್ನು ತೆಗೆಯಬಹುದು, ಜಲಾಶಯಗಳಲ್ಲಿ ನೀರು ತುಂಬಿ ಕಾಲುವೆಗಳಲ್ಲಿ ನೀರನ್ನು ಹರಿಸಬಹುದು, ಆದರೆ ನೀರಾವರಿಯ ಉದ್ದೇಶ ನೀರನ್ನು ಜಲಾಯದಲ್ಲಿ ತುಂಬುವುದು. ಮತ್ತು ಕಾಲುವೆಗಳಲ್ಲಿ ಬಿಡತಕ್ಕುದು ಅಲ್ಲ. ಅದರ ಉದ್ದೇಶ ಭೂಮಿಯಂನ್ನುಶ ನೀರಾವರಿಗೆ ಒಳಪಡಿಸಿ ಅಧಿಕ ಪ್ರಮಾಣದಲ್ಲಿ ಎಲ್ಲೆಲ್ಲಿ ಬೆಳೆಯನ್ನು ಬೆಳೆಯುವುದಕ್ಕೆ ಸಾಧ್ಯವಿದೆ ಅಲ್ಲೆಲ್ಲಾ ಹೇಗೆ ಬೆಳೆಯಬೇಕು ಎಂದು ತಿಳುವಳಿಕೆಯನ್ನು ಕೊಡುವುದು ನೀರಾವರಿಯ ಉದ್ದೇಶ ಇದೆ. ಆದರೆ ಈಗ ಏನಾಗಿದೆ ಎಂದರೆ ಅನೇಕ ಅಚ್ಚುಕಟ್ಟು ಪ್ರದೇಶಗಳಲ್ಲಿ ಜಲಾಶಯಗಳಲ್ಲಿ ನೀರು ಇದ್ದರೂ ಸಹ ಕಾಲುವೆಗಳಲ್ಲಿ ನೀರು ಹೆಚ್ಚು ಬಂದರೂ ಕೂಡ ನೀರನ್ನು ಪ್ರಯೋಜನ ಮಾಡಿಕೊಂಡು ವ್ಯವಸಾಯ ವನ್ನು ಯಾವ ಮಟ್ಟದಲ್ಲಿ ನಡೆಸಬೇಕೋ ಅದನ್ನು ನಡೆಸದೇ ಇರತಕ್ಕ ಪರಿಸ್ಥಿತಿಯನ್ನು ತಾತ್ಕಾರ್ತಿಕವಾಗಿ ಗಮನಿಸಬೇಕಾಗಿದೆ. ಇದಕ್ಕೆ ಪ್ರಾಮುಖ್ಯವಾದ ಕಾರಣವೇನೆಂದರೆ. ಒಂದು ಕೋಟ್ಯಾಂತರ ರೂಪಾಯಿ ಗಳ ಯೋಜನೆಯನ್ನು ಮಾಡಿ ಜಲಾಶಯಗಳನ್ನು ನಿರ್ಮಿಸಿ ನೀರು ತುಂಬಿಸಿ ಕಾಲುವೆಗಳಲ್ಲಿ ಹರಿಸತಕ್ಕ ನೀರಿನ ನಿಜವಾದ ಬೆಲೆಯನ್ನು ಜನಗಳು ಆರ್ಥ ಮಾಡಿಕೊಳ್ಳದೆ ಇರತಕ್ಕದ್ದು. ಇದರ ಒಂದೊಂದು ಹನಿಯೂ ಕೂಡ ಬೆಲೆಯುಳ್ಳದ್ದು. ಇದರಿಂದ ವಿಶೇಷವಾದ ಉತ್ಪತ್ತಿಯನ್ನು ಮಾಡುವುದಕ್ಕೆ ಸಾಧ್ಯವಿದೆ. ಆ ರೀತಿ ಉತ್ಪಾದನೆ ಮಾಡುವುದಕ್ಕೆ ಪ್ರಯತ್ನ ಮಾಡತಕ್ಕದ್ದು ನಮ್ಮ ಕರ್ತವ್ಯ.

ಎರಡನೆಯದು, ಏನೆಂದರೆ ಭೂಮಿಯನ್ನು ಸಮತಳ ಮಾಡಿ ಅಭಿವೃದ್ಧಿಗೆ ಒಳಪಡಿಸತಕ್ಕುದ್ದು ಈ ವಿಚಾರದಲ್ಲಿ ಅನೇಕ ರೀತಿಯ ತೊಡಕುಗಳು ಇವೆ. ಈ ತೊಡಕು ಗಳಲ್ಲಿಬಹಳ ಪ್ರಾಮುಖ್ಯವಾದುವು ಎಂದರೆ ಭೂಮಿಯನ್ನು ನೀರಾವರಿಗೆ ಒಳಪಡಿಸುವುದಕ್ಕೆ ಬೇಕಾದಂತಹ ಪೂರ್ವಭಾವಿ ಕಾರ್ಯ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಬಂಡವಾಳ ಅಗತ್ಯ ಇದೆ. ಅನೇಕ ಜನ ರೈತರಿಗೆ ನಾನಾ ಕಾರಣಗಳಿಂದಈ ಬಂಡವಾಳವನ್ನು ಸಹಾಯ ಮಾಡತಕ್ಕಂಥ ಸಂಸ್ಥೆಗಳಿಂದ ಸಹಾಯವನ್ನು ಪಡೆದುಕೊಳ್ಳುವುದಕ್ಕೆ ಅರ್ಹತೆ ಇಲ್ಲದೆ ಇರತಕ್ಕ ಒಂದು ತೊಡಕಾಗಿತ್ತು. ಇನ್ನೊಂದು ತೊಡಕು ಏನೆಂದರೆ ಅನೇಕ ಜನಗಳಿಗೆ ಈ ರೀತಿ ಸಹಾಯವನ್ನು ಪಡೆಮಕೊಂಡು ತಮ್ಮ ಭೂಮಿಯನ್ನು ಅಭಿವೃದ್ಧಿ ಪಡಿಸುವುದಕ್ಕೆ ಮನಸ್ಸು ಇಲ್ಲ. ಅವನು ತನ್ನ ಭೂಮಿಯನ್ನು ಅಭಿವೃದ್ಧಿಗೆ ಒಳಪಡಿಸದೇ ಹೋದರೆ ಅವನ ಪಕ್ಕದಲ್ಲಿರತಕ್ಕ ಒಂದು ಎಕರೆ ಪ್ರದೇಶವನ್ನು ಒಬ್ಬರು ಅಭಿವೃದ್ಧಿಗೆ ಒಳಪಡಿಸದೇ ಹೋದರೆ, ಅದರ ಮೂಲಕ ನೀರು ಹರಿದು ಮುಂದಿನ ಭೂಮಿಗೆ ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಹೀಗಾಗಿ ಸಾವಿರಾರು ಎಕರೆ ಭೂಮಿಗೆ ನೀರಿನ ಸೌಲಭ್ಯವನ್ನು ಒದಗಿಸಿದ್ದರೂ ಕೂಡ ಅದನ್ನು ಬಳಸಿಕೊಳ್ಳುವುದಕ್ಕೆ ಆಗದೆ ಇರತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಇದನ್ನೆಲ್ಲಾ ಸರಿಪಡಿಸುವುದಕ್ಕೆ ಈ ನೀರಾವರಿ ಅಚ್ಚುಕಟ್ಟು ಪ್ರದೇಶಕ್ಕೆ ಸಂಬಂಧಪಟ್ಟ ಪ್ರಾಧಿಕಾರವನ್ನು ರಚನೆ ಮಾಡಬೇಕು ಎಂದು ಸರ್ಕಾರ ಹಿಂದೆ ೧೯೭೪ರಿನೇ ಇಸವಿಯಲ್ಲಿತುಂಗಭದ್ರಾ ಯೋಜನೆ, ಕಾವೇರಿ ಯೋಜನೆ, ಹಾರಂಗಿ ಯೋಜನೆ, ಹೇಮಾವತಿ ಯೋಜನೆ ಇವುಗಳಿಗೆ ಸಂಬಂಧಪಟ್ಟ ಹಾಗೆ ಕಮ್ಯಾಂಡ್ ಏರಿಯಾ ಡೆವಲಪ್‌ಮೆಂಟ್ ಅಥಾರಿಟಿ ಎಂದು ಹೇಳಿ ಅಚ್ಚುಕಟ್ಟು ಪ್ರದೇಶದ ಅಭಿವೃದ್ಧಿ ಪ್ರಾಧಿಕಾರಗಳನ್ನು ಸ್ಥಾಪನೆ ಮಾಡಿತ್ತು. ೧೯೭೭ರಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಗೆ ಸಂಬಂಧಪಟ್ಟಂತೆ ಕೂಡ ಒಂದು ಪ್ರಾಧಿಕಾರವನ್ನು ರಚನೆ ಮಾಡಿತ್ತು. ಆದರೆ ಈ ಪ್ರಾಧಿಕಾರಗಳೆಲ್ಲಾ ಸರ್ಕಾರದಆಡಳಿತಾತ್ಮಕವಾಗಿ ನಿರ್ಮಾಣಗೊಂಡಪ್ರಾಧಿಕಾರಿಗಳು.ಹೀಗಿರುವುದರಿಂದ ಅವು ಕೇವಲ ಬೃಹತ್ ಸ್ವರೂಪದ ಕಾರ್ಯಕ್ರಮಗಳನ್ನು ಕೈಗೊಳ್ಳುವುದಕ್ಕೆ ಸಾಧ್ಯವಾಯಿತು. ಈ ರೀತಿ ಕೇವಲ ಆಡಳಿತಾತ್ಮಕ ದೃಷ್ಟಿಯಿಂದ ಮಾಡಿರುವ ಪ್ರಾದಿಕಾರಿಗಳು ಕೇವಲ ಪ್ರೋತ್ಸಾಹದ ಸ್ವರೂಪದ ಕೆಲಸ ವನ್ನು ಮಾಡಿದರೆ ಅದರಿಂದ ನಿರೀಕ್ಷೆ ಮಾಡಿದಷ್ಟು ಅಚ್ಚುಕಟ್ಟು ಪ್ರದೇಶದ ಅಭಿವೃದ್ಧಿಯನ್ನು ಸಾಧಿಸು ವುದಕ್ಕೆ ಆಗುವುದಿಲ್ಲಎಂದು ನನ್ನ ಅನುಭವಕ್ಕೆ ಬಂತು. ನಾನು ಈಗಾಗಲೇ ಹೇಳಿದ ಹಾಗೆ ಎರಡು ರೀತಿಯ ರೈತರು ಅಚ್ಚುಕಟ್ಟು ಪ್ರದೇಶದಲ್ಲಿ ಇದ್ದಾರೆ. ಇವೊತ್ತು ನಾನಾ ಕಾರಣಗಳಿಂದ ಸಹಾಯವನ್ನು ಪಡೆದುಕೊಳ್ಳುವುದಕ್ಕೆ ಸಾಮಾರ್ಥ್ಯವನ್ನು ಕಳೆದುಕೊಂಡು ಇರತಕ್ಕ ರೈತರು ಏನಿದ್ದಾರೆ ಅವರಿಗೆ ಎಲ್ಲಿ ಬಲ್ ಪಾರ್ಮರ್ಸ್ ಎಂದು ವಿವರಣೆ ಕೊಟ್ಟಿದ್ದೇವೆ ಇನ್ನೊಂದು ವರ್ಗದ ರೈತರು ಎಂದರೆ ಸಾಲವನ್ನು ತೆಗೆದುಕೊಳ್ಳುವುದಕ್ಕೆ ಬೇಕಾದಂತಹ ಎಲ್ಲಾ ಅರ್ಹತೆಗಳೂ ಮತ್ತು ಸಾಮರ್ಥ್ಯ ಇದ್ದರೂ ಕೂಡ ಆ ಸಾಲವನ್ನು ಪಡೆದುಕೊಂಡು ತಮ್ಮ ಭೂಮಿಯನ್ನು ಅಭಿವೃದ್ಧಿ ಮಾಡುವುದಕ್ಕೆ ಮನಸ್ಸು ಇಲ್ಲದೆ ಇರತಕ್ಕ ರೈತರು ಏನಿದ್ದಾರೆ ಅವರನ್ನು ಅನ್ ವಿಲ್ಲಿಂಗ್ ಫಾರ್ಮರ್ಸ್ ಎಂದು ಈ ವಿಧೇಯಕದಲ್ಲಿ ವಿವರಣೆ ಕೊಟ್ಟಿ ದ್ದೇವೆ.

ಈ ಸಮಸ್ಯೆಯನ್ನು ಎದುರಿಸಬೇಕಾದರೆ. ಭೂಮಿಯನ್ನು ಅಭಿವೃದ್ಧಿ ಪಡಿಸುವುದಕ್ಕೆ ಅಗತ್ಯವಾದ ಬಂಡವಾಳವನ್ನು ಒದಗಿಸಿಕೊಟ್ಟು, ಅಗತ್ಯ ಬಿದ್ದರೆ ಭೂಮಿಯನ್ನು ಕಡ್ಡಾಯವಾಗಿ ಅಭಿವೃದ್ಧಿಗೆ ಒಳ ಪಡಿಸದಿದ್ದರೆ ಈ ಪ್ರಾಧಿಕಾರದ ಅರ್ಥ ಶೂನ್ಯವಾದಂತಾಗುತ್ತದೆಯೆಂದು ನಾವು ಇದನ್ನು ಶಾಸನಬದ್ಧ ಸಂಸ್ಥೆ ಯಾಗಿ ಮಾಡಬೇಕೆಂದು ಮಾಡಿದ್ದೇವೆ. ಈ ರೀತಿ ಶಾಸನ ಬದ್ಧ ಸಂಸ್ಥೆಯಾಗಿ ಮಾಡಲು ಶಾಸನವನ್ನು ತರ ಬೇಕೆಂದು ಅಗ್ರಿಕಲ್ಚರಲ್ ರೀ ಫೈನಾನ್ಸ್, ಕಾರ್ಪೊರೇಷನ್‌ನವರುನಮ್ಮ ಮೇಲೆ ಕಾಲಕಾಲಕ್ಕೆ ಒತ್ತಾಯ ಹಾಕಿದ್ದಾರೆ. ಆದ್ದರಿಂದ ನಾವುಈ ಒಂದು ಮಸೂದೆಯನ್ನು ಸಭೆಯ ಮುಂದೆ ಮಂಡಿಸಿದ್ದೇವೆ.

ಇದರಲ್ಲಿ ಏನು ಮಾಡಿದ್ದೇವೆಂದರೆ, ಯಾವುದೇ ಒಂದು ಪ್ರದೇಶವನ್ನು ಅದು ಅಚ್ಚುಕಟ್ಟು ಪ್ರದೇಶ ವೆಂದು ಘೋಷಿಸಿ ಅದಕ್ಕೆ ಒಂದು ಪ್ರಾಧಿಕಾರ ಸಂಸ್ಥೆಯನ್ನು ರಚನೆ ಮಾಡಿ ಅದರಲ್ಲಿ ಎಷ್ಟು ಜನ ಸದಸ್ಯ ರಿರಬೇಕು, ಅದರ ಅಧ್ಯಕ್ಷರನ್ನು ಯಾವ ರೀತಿ ನೇಮಕ ಮಾಡಬೇಕು ಎಂಬುದನ್ನೆಲ್ಲಾ ಈ ಮಸೂದೆಯಲ್ಲಿ ಕಾಣಿಸಿದ್ದೇವೆ. ಈ ಪ್ರಾಧಿಕಾರ ಸಂಸ್ಥೆಯು ಸಾಲ ಪಡೆಯುಲು ಮನಸ್ಸಿಲ್ಲದ ಹಾಗೂ ಅನರ್ಹ ರೈತರ ಪರವಾಗಿ ಸಾಲ ಪಡೆಯಲು ಅಧಿಕಾರವನ್ನು ಹೊಂದಿದೆ. ನಾವು ಹಿಡಿದಿಟ್ಟಿರತಕ್ಕ ನೀರಿನ ಕಿಮ್ಮತ್ತು ಎಷ್ಟು? ಒಂದು ಕ್ಯೂಸೆಕ್ಸ್ ನೀರಿಗೆ ಎಷ್ಟು ಭೂಮಿಯನ್ನು ನೀರಾವರಿ ಮಾಡಬಹುದು ಎಂಬ ವಿವೇಚನೆ ಈ ದಿವಸ ಅನೇಕ ರೈತರಿಗೆ ಇಲ್ಲ; ಎಷ್ಟೋ ಕಡೆ ನೀರು ಸುಮ್ಮನೆ ಪರಿದುಹೋಗುತ್ತಿರುತ್ತದೆ. ಆದರೆ ಅದರ ಕಿಮ್ಮತ್ತು ಜನಗಳಿಗೆ ಗೊತ್ತಿರುವುದಿಲ್ಲ. ಹರಿದು ಹೋಗುವ ನೀರಿನಿಂದ, ಆಥವಾ ಅಚ್ಚುಕಟ್ಟು

ಪ್ರದೇಶದಲ್ಲಿ ಸಿಕ್ಕುವ ನೀರಿನಿಂದ ನಮ್ಮ ಜಮೀನನ್ನು ಅಭಿವೃದ್ಧಿ ಮಾಡಿಕೊಳ್ಳಬೇಕೆಂಬ ಅರಿವು, ಕಳಕಳಿ ನಮಗೆಲ್ಲಾ ಇರಬೇಕು. ಈ ಉದ್ದೇಶದಿಂದಲೇ ಅಚ್ಚುಕಟ್ಟು ಪ್ರದೇಶದಲ್ಲಿ ನಿಯಂತ್ರಿತ ನಳ ಮತ್ತು ತೂಬು ವ್ಯವಸ್ಥೆಯನ್ನು ಮಾಡಿ, ಅವಶ್ಯಕವಾಗಿ ಪೋಲಾಗತಕ್ಕ ನೀರನ್ನು ಉಪಯೋಗ ಮಾಡಿಕೊಳ್ಳಲು ವ್ಯವಸ್ಥೆ ಮಾಡಿದ್ದೇವೆ.

ಮಾನ್ಯ ಸಭಾಧ್ಯಕ್ಷಿಣಿಯವರೆ, ಈ ವಿಧೇಯಕದಲ್ಲಿರತಕ್ಕ ಎಲ್ಲ ಅಂಶಗಳ ಮೇಲೂ ನಾನೂ ಸುದೀರ್ಘವಾದ ವಿವರಣೆಯನ್ನು ಕೊಡಬೇಕಾದ ಅಗತ್ಯವಿಲ್ಲ. ಸಾಕಷ್ಟು ರೀತಿಯಿಂದ ಈ ವಿಧೇಯಕವನ್ನು ಪರಿಶೀಲಿಸಿ ತಯಾರಿಸಿದ್ದೇವೆ. ಹೆಚ್ಚು ಕಾಲಾವಕಾಶವಿದ್ದಿದ್ದರೆ ಇದರ ಬಗ್ಗೆ ಕೂಲಂಕಷವಾಗಿ ಚರ್ಚೆಗೆ ಮಂಡಿಸಬಹುದಾಗಿತ್ತು. ಈಗಲೂ ಕೂಡ ಮಾನ್ಯ ಸದಸ್ಯರುಗಳು ತಮಗೆ ತಿಳಿದಂಥ ಅಮೂಲ್ಯ ಸಲಹೆಗಳೇನಾದರೂ ಇದ್ದರೆ ಕೊಡಬಹುದು. ಅವುಗಳನ್ನು ಸರ್ಕಾರ ಪರ್ಯಾಲೋಚನೆ ಮಾಡಿ ಮಸೂದೆಯಲ್ಲಿ ಅಳವಡಿಸಿಕೊಳ್ಳುತ್ತದೆ. ಆದರೆ ಯಾವುದೇ ಕಾರಣದಿಂದ ಈ ವಿಧೇಯಕವನ್ನು ತಡೆಹಿಡಿದರೆ ಒಂದೊಂದು ಮಳೆಗಾಲ ತಪ್ಪಿಹೋದಂತೆಲ್ಲಾ ಅಷ್ಟೇ ದೊಡ್ಡ ಪ್ರಮಾಣದಲ್ಲಿ ದೇಶಕ್ಕೆ ಹಾನಿಯಾಗುತ್ತದೆ.

ಆದುದರಿಂದ ಈಗ ಮಾನ್ಯ ಸಭೆಯು ಈವಿಧೇಯಕಕ್ಕೆ ಸರ್ವಾನುಮತದ ಅನುಮೋದನೆಯನ್ನು ನೀಡಿ, ಇದರಲ್ಲಿ ಯಾವುದಾದರೂ ಅಡಚಣೆಗಳು ಕಂಡುಬಂದಲ್ಲಿ ಅವುಗಳಿಗೆ ಸೂಕ್ತ ಸಲಹೆಗಳನ್ನು ನೀಡಿದಲ್ಲಿ ಖಂಡಿತವಾಗಿಯೂ ಆ ಸಲಹೆಗಳನ್ನು ಪರಿಶೀಲಿಸಿ ಸೂಕ್ತ ತಿದ್ದುಪಡಿಗಳನ್ನು ಮಾಡಿಕೊಳ್ಳುತ್ತೇವೆಂದು ಭರವಸೆ ನೀಡ ಬಯಸುತ್ತೇನೆ. ಮತ್ತು ಈ ವಿಧೇಯಕಕ್ಕೆ ಮಾನ್ಯ ಸಭೆಯು ತನ್ನ ಸರ್ವಾನುಮತದ ಅನುಮೋದನೆಯನ್ನು ನೀಡಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ-

ಶ್ರೀ ಎಸ್. ಆರ್. ಬೊಮ್ಮಾಯಿ (ಹುಬ್ಬಳ್ಳಿ).—ಸನ್ಮಾನ್ಯ ಸಭಾಧ್ಯಕ್ಷಿಣಿಯವರೆ, ಈ ಮಸೂದೆಯನ್ನು ಸ್ವಾಗತ ಮಾಡುತ್ತಾ ನಾನು ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ.

ಈ ರಾಜ್ಯದಲ್ಲಿ ಯಾವುದೇ ಒಂದು ಬೃಹತ್ ನೀರಾವರಿ ಯೋಜನೆಯನ್ನು ತೆಗೆದುಕೊಂಡರೂ ನೂರಾರು ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ನೀರನ್ನು ಶೇಖರಿಸಿ ೫-೧೦ ವರ್ಷಗಳವರೆಗೆ ನೀರಾವರಿಯನ್ನು ಅಭಿವೃದ್ಧಿ ಮಾಡಿರುವುದನ್ನು ನಾನು ನೋಡಿದ್ದೇನೆ. ಇವತ್ತು ತುಂಗಭದ್ರಾ ಆಣೆಕಟ್ಟನ್ನು ಕಟ್ಟಿದಮೇಲೆ ಸುಮಾರು ೧೫ ವರ್ಷಗಳವರೆಗೂ ಸರಿಯಾದ ಕಾಲುವೆಗಳಿಲ್ಲದೆ, ಭೂಮಿ ಸಮಪಾತಳಿ ಮಾಡದೆ ಭೂಮಿಯನ್ನು ಅಚ್ಚುಕಟ್ಟು ಮಾಡುವುದಕ್ಕಾಗಲಿಲ್ಲ. ಮಲಪ್ರಭಾ ಆಣೆಕಟ್ಟಿನ ನೀರನ್ನೂ ಕೂಡ ಸದುಪಯೋಗ ಮಾಡಿಕೊಳ್ಳಲು ಅವಕಾಶವಾಗಿಲ್ಲ. ಈ ಪ್ರಶ್ನೆಯನ್ನು ನಾನು ಹಲವಾರು ಸಾರಿ ಈ ಸದನದಲ್ಲಿ ಹೇಳಿದ್ದೇನೆ. ಯಾವುದೇ ಒಂದು ಬೃಹತ್ ನೀರಾವರಿ ಯೋಜನೆಯನ್ನು ಕೈಗೊಳ್ಳುವಾಗಲೂ ಕೂಡ ಬರೀ ಆಣೆಕಟ್ಟು ಕಟ್ಟುವುದಷ್ಟೇ ಅಲ್ಲ, ಕಾಲುವೆಗಳನ್ನು ನಿರ್ಮಿಸುವುದು, ಭೂಮಿಯನ್ನು ಸಮಪಾತಳಿ ಮಾಡುವುದು ಈ ಎರಡು ಕೆಲಸಗಳನ್ನೂ ಕೂಡ ಏಕಕಾಲದಲ್ಲೇ ಮಾಡಬೇಕು. ನನಗೆ ಗೊತ್ತಿರುವಂತೆ ಮಲಪ್ರಭಾ ಅಚ್ಚುಕಟ್ಟಿನಲ್ಲಿ ಸುಮಾರು ೬ ವರ್ಷದಿಂದ ಭೂಮಿ ಸಮಪಾತಳಿಯಾಗಿಲ್ಲ. ರೈತರಿಗೆ ಹಣ ಸಹಾಯ ನೀಡಿಲ್ಲ. ಭೂಮಿಯನ್ನು ಸಮಪಾತಳಿ ಮಾಡಲು ಪ್ರಾಜೆಕ್ಟ್ ಏರಿಯಾ ಆಫೀಸರ್ ಎಂದು ನೇಮಕ ಮಾಡಿದ್ದೀರಿ. ಈ ಭೂಮಿಯನ್ನು ಸಮಪಾತಳಿ ಮಾಡುವ ವ್ಯವಸೆ ಗೆ ಒಂದು ಸಾರಿ ಧಾರವಾಡ ಜಿಲ್ಲೆಯ ಲೆಜಿಸ್ಲೇಟರ್ಸ್ ಎಲ್ಲರೂ ಖುದ್ದಾಗಿ ಹೋಗಿ ನೋಡಿದಾಗ ಭೂಮಿಯನ್ನು ಸಮಪಾತಳಿ ಮಾಡುವುದಕ್ಕೆ ೧೩ ಟ್ರ್ಯಾಕ್ಟರ್ ಮತ್ತು ಬುಲ್ಡೋಜರ್ಸ್ ಕೊಟ್ಟಿದ್ದೀರಿ. ನವಲಗುಂದ ಮತ್ತು ಇನ್ನೊಂದು ಊರಿನಲ್ಲಿ ೧೩ ಟ್ರ್ಯಾಕ್ಟರ್‌ಗಳ ಪೈಕಿ ೩ ಟ್ರ್ಯಾಕ್ಟರ್‌ಗಳು ಮಾತ್ರ ಕೆಲಸ ಮಾಡುತ್ತಿದ್ದವು. ಅದು ಕಪ್ಪು ಭೂಮಿ. ಆ ಭೂಮಿಯ ಒಂದು ವಿಚಿತ್ರ ಏನೆಂದರೆ. ಅಲ್ಲಿ ಮಳೆ ಬಂದರೆ ಯಾವ ಟ್ರ್ಯಾಕ್ಟರ್‌ಗಳೂ, ಬುಲ್ಡೋಜರ್‌ಗಳೂ ಹೋಗುವುದಕ್ಕಾಗುವುದಿಲ್ಲ. ಮಳೆ ಬಾರದೇ ಹೋದರೆ ಭೂಮಿಯೆಲ್ಲಾ ಬಿರುಕು ಉಂಟಾಗಿ ಆಗಲೂ ಟ್ರ್ಯಾಕ್ಟರ್‌ಗಳು ಹೋಗಿ ಕೆಲಸಮಾಡುವುದಕ್ಕಾಗುವುದಿಲ್ಲ. ಸರ್ಕಾರದವರು ಏನು ಮಾಡುತ್ತಿದ್ದೀರಿ, ರೈತರು ನೀರನ್ನು ಉಪಯೋಗಿಸಿ ಕೊಳ್ಳದಿದ್ದರೂ ಅವರ ಮೇಲೆ ನೀರಿನ ತೆರಿಗೆಯನ್ನು ಹಾಕುತ್ತಿದ್ದೀರಿ. ಇದು ಸರಿಯಲ್ಲ, ರೈತರು ಎಲ್ಲಿಯವರೆಗೆ ನೀರನ್ನು ಉಪಯೋಗಿಸುವುದಿಲ್ಲ. ಅಲ್ಲಿಯವರೆಗೂ ನೀರಿನ ತೆರಿಗೆಯನ್ನು ಹಾಕಕೂಡದೆಂದು ಕಾರ್ಯದವರಿಗೆ ನಾನು ಹೇಳಿದ್ದೇನೆ.

ಮಾನ್ಯ ಸಭಾಧ್ಯಕ್ಷಿಣಿಯವರೆ, ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ಒಂದು ವಿಷಯವನ್ನು ತರಬಯಸುತ್ತೇನೆ. ಸಾಮಾನ್ಯವಾಗಿ ರೈತರಿಗೆ ಕನ್ನಡವನ್ನೇ ಓದುವುದಕ್ಕೆ ಬರುವುದಿಲ್ಲ. ಅಂಥವರಿಗೆ ಸರ್ಕಾರದವರು ಕಳುಹಿಸಿರುವ ನೋಟಿಫಿಕೇಷನ್ ಇಂಗ್ಲೀಷ್‌ನಲ್ಲಿದೆ.

ಶ್ರೀ ಕೆ. ಪೆಚ್. ಶ್ರೀನಿವಾಸ.—ಈ ನೋಟಿಫಿಕೇಷನ್‌ನ್ನು ಕನ್ನಡದಲ್ಲಿ ಕಳುಹಿಸಿದ್ದೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಮ್ಮ ನೋಟಿಫಿಕೇಷನ್ ಇಂಗ್ಲೀಷ್‌ನಲ್ಲಿ ಇರುವುದರಿಂದ ರೈತರಿಗೆ ಅದು ಅರ್ಥವಾಗದೆ ಬಹಳ ಜನ ತೊಂದರೆಗೀಡಾಗಿದ್ದಾರೆ. ಸುಮಾರು ೩೦೦೦ ಕೇಸುಗಳು ಇದುವರೆಗೂ ಎಕ್ಸ್‌ಪಾರ್ಟಿ ಆಗಿವೆ. ನಾನು ಹೆಚ್ಚು ಕಾಲ ಮಾತನಾಡಬೇಕೆಂದಿದ್ದೆ. ಆದರೆ ಕಾಲಾವ ಕಾಶವಿಲ್ಲವಾದ್ದರಿಂದ ತಮಗೆ ಒಂದು ಮಾತನ್ನು ಹೇಳಬಯಸುವುದೇನೆಂದರೆ, ಯಾವುದೇ ರೀತಿಯ ತೊಂದರೆಯೂ ಇಲ್ಲದೆ ರೈತರು ನೀರನ್ನು ಸದುಪಯೋಗಪಡಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡ ಬೇಕು. ಈ ವಿಧೇಯಕದಲ್ಲಿ ಇನ್ನೂ ಏನಾದರೂ ಅಡಚಣೆಗಳು ಇದ್ದಲ್ಲಿ ಅವನ್ನು ಸರ್ಕಾರಕ್ಕೆ ತಿಳಿಸು ತ್ತೇವೆಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಕುಮಾರಿ ಎಸ್. ಪ್ರಮಿಳ (ಚಾಮರಾಜಪೇಟೆ).—ಮಾನ್ಯ ಸಭಾಧ್ಯಕ್ಷಿಣಿಯವರೆ, ಈ ಬಿಲ್ಲನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಮಾನ್ಯ ಮಂತ್ರಿಗಳ ಗಮನಕ್ಕೆ ಒಂದು ಅಂಶವನ್ನು ತರುತ್ತೇನೆ. ಈ ಬಿಲ್ಲಿನ ಸೆಕ್ಷನ್ ೨೭ ಮತ್ತು ಸೆಕ್ಷನ್ ೩೮ರ ಬಗ್ಗೆ ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರ ಬಗ್ಗೆ ಈ ದಿವಸ ಸಂಬಂಧಪಟ್ಟ ಮಂತ್ರಿಗಳನ್ನು ಒಂದು ಪ್ರಶ್ನೆ ಕೇಳುತ್ತೇನೆ. ತಾವು ಆರ್ಡಿನೆನ್ಸ್ ರಿಪೀಲ್ ಮಾಡಿದ್ದೀರಿ. ಕಾನೂನನ್ನು ತಂದಿದ್ದೀರಿ ಕಾನೂನಾದ ನಂತರ ಇರಿಗೇಷನ್ ಆಕ್ಟ್ ಏನಿದೆ ಅದರ ಪ್ರಕಾರ ವಾಟರ್ ರೇಟ್ ಲೆವಿ ಮಾಡುತ್ತಿದ್ದೀರಿ. ರೈತರ ಮೇಲೆ ಟ್ಯಾಕ್ಸ್ ಹಾಕಿ ವಸೂಲು ಮಾಡು ತ್ತಿದ್ದೀರಿ. ಸೆಕ್ಷನ್ ೩೮ರಲ್ಲಿ,

> "FEES FOR SERVICE –The Authority may charge such fees as may be specified in the rules made under this Act' for rendering any service to any person."

ಎಂದು ಹೇಳಿದ್ದೀರಿ. ಅಂದಮೇಲೆ ಈ ಕಾನೂನು ಪ್ರಕಾರ ನೀವು ರೈತರ ಮೇಲೆ ಫೀಜು ಲೆವಿ ಮಾಡು ತ್ತೇವೆಂದು ಹೇಳುತ್ತೀರಿ. ಇರಿಗೇಷನ್ ಆಕ್ಟ್‌ನಲ್ಲಿ ನೀವು ರೈತರಿಗೆ ನೀರನ್ನು ಒದಗಿಸಿಕೊಡತಕ್ಕ ಕಾರಣ ದಿಂದ ವಾಟರ್ ರೇಟನ್ನು ಹಾಕಿ ವಸೂಲು ಮಾಡುತ್ತಿದ್ದೀರಿ. ಇರಿಗೇಷನ್ ಆಕ್ಟ್ ಪ್ರಕಾರ ವಾಟರ್ ರೇಟನ್ನೂ ಹಾಕಿ ಈ ಕಾನೂನಿನ ಪ್ರಕಾರ fees for service ಹಾಕಿದರೆ ರೈತರ ಗತಿ ಏನಾಗಬೇಕು ? ಆದುದರಿಂದ ಇದರ ಬಗ್ಗೆ ತಾವು ತಕ್ಷಣ ಗಮನಹರಿಸಿ ವಾಟರ್ ರೇಟನ್ನು ತೆಗೆದುಹಾಕಿ ; ರೈತರಿಗೆ ಹೊರೆಯಾಗುವುದನ್ನು ತಪ್ಪಿಸಿ ಎಂದು ಕೇಳಿಕೊಳ್ಳುತ್ತೇನೆ. ಇದರಲ್ಲಿ ಫೀಸ್ ಫಾರ್ ಸರ್ವೀಸ್ ಎಂದು ಹಾಕಿದ್ದೀರಿ, ಅಲ್ಲಿ ವಾಟರ್ ರೇಟನ್ನೂ ಹಾಕಿದ್ದೀರಿ, ಇದರಿಂದ ರೈತರಿಗೆ ಹೊರಲಾರದಷ್ಟು ಹೊರೆಯಾಗುತ್ತದೆ. ಆದುದರಿಂದ ಇದರಲ್ಲಿ ಯಾವುದಾದರೂ ಒಂದನ್ನು ಇಟ್ಟುಕೊಂಡು, ಒಂದನ್ನು ತೆಗೆದುಹಾಕಿ ಎಂದು ಕೇಳಿಕೊಳ್ಳುತ್ತೇನೆ.

ಇನ್ನು ಮುಖ್ಯವಾಗಿ ೨೭ನೇ ಸೆಕ್ಷನ್‌ನ್ನು ನಾನು ಓದಬೇಕು. ಅದರಲ್ಲಿ

> "Liability when person using water unauthorisedly cannot be found".

ಎಂದು ಹೇಳಿದ್ದೀರಿ. ಅಂದರೆ ಯಾವನಾದರು ಒಬ್ಬ ರೈತ ಅನಧಿಕೃತವಾಗಿ ನೀರನ್ನು ಉಪಯೋಗಿಸಿ ಕೊಂಡಿದ್ದೇ ಆದರೆ, ಅವನು ಯಾರು, ಎಂಬುದು ಗೊತ್ತಾಗದೇ ಹೋದರೆ ಏನು ಮಾಡಬೇಕು ಎಂದು ಹೇಳಿದ್ದೀರಿ. ಅವನು ಸಿಕ್ಕದೇ ಹೋದರೆ ಅಲ್ಲಿ ಯಾರಿದ್ದಾರೆ ಅವರೆಲ್ಲರ ಮೇಲೆ ನೋಟೀಸ್ ಕೊಟ್ಟು ಎಲ್ಲರ ಹತ್ತಿರ ಹಣ ವಸೂಲು ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶ ಮಾಡಿದ್ದೀರಿ. ಯಾರೋ ತಪ್ಪು ಮಾಡಿದರೆ ಯಾರನ್ನೋ ಶಿಕ್ಷೆಗೆ ಗುರಿ ಪಡಿಸುತ್ತೀರಿ. ತಪ್ಪಿಸ್ಥರಿಗೆ ಶಿಕ್ಷೆ ಕೊಡುವುದು ನಿಮ್ಮ ಧರ್ಮ. ಎಲ್ಲರಿಗೂ ನೋಟೀಸ್ ಕೊಟ್ಟು ಕ್ರಮ ತೆಗೆದುಕೊಳ್ಳಲಿಕ್ಕೆ ಸೆಕ್ಷನ್ ೨೭ರಲ್ಲಿ ಏನು ತಂದಿದ್ದೀರಿ ಇದು ಅನ್ಯಾಯ. ತಪ್ಪು ಮಾಡಿದವರನ್ನು ಹುಡುಕಿರಿ, ಸಿಕ್ಕದೇಹೋದರೆ ಬಿಡಿ. ಎಲ್ಲರ ಮೇಲೂ ಕ್ರಮ

ತೆಗೆದುಕೊಳ್ಳತಕ್ಕಂಥಾದ್ದು ಅಧರ್ಮ. ಇದನ್ನು ಯಾರೂ ಕೂಡ ಮೆಚ್ಚತಕ್ಕದ್ದಲ್ಲ. ಇದನ್ನು ತೆಗೆದುಹಾಕಬೇಕು ಎಂದು ಕೇಳಿಕೊಳ್ಳುತ್ತೇನೆ. ಇಲ್ಲದೇಹೋದರೆ, ಶಾಸಕರು ಏನಾದರೂ ಒಂದು ಸಾಮಾನನ್ನು ಕೊಂಡರೆ ಅದು ಸಿಕ್ಕದೇಹೋದರೆ ಇಡೀ ಶಾಸಕರೆಲ್ಲರ ಜವಾಬ್ದಾರಿ ಎಂದು ಹೇಳಿದರೆ ಎಷ್ಟು ಅಧರ್ಮವಾಗುತ್ತದೆ, ಅದೇರೀತಿ ಈ ಕಾನೂನನ್ನು ತಂದಿದ್ದೀರಿ, ಇದನ್ನು ಸರಿಪಡಿಸಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಟಿ. ಆರ್. ಶಾಮಣ್ಣ (ಬಸವನಗುಡಿ).—ಸನ್ಮಾನ್ಯ ಅಧ್ಯಕ್ಷಣಿಯಂವರೇ. ಇದು ಅತಿ ಮುಖ್ಯ ವಾದಂಥ ಒಂದು ಮಸೂದೆ. ನಮ್ಮ ರಾಜ್ಯದ ಆಗುಹೋಗುಗಳ ಬಗ್ಗೆ ಪರಿಣಾಮಕಾರಿಯಾಗಿ ತನ್ನ ಒಂದು ಪ್ರಾಮುಖ್ಯತೆಯನ್ನು ಬೀರತಕ್ಕ ವಿಷಯ ಇದು. ಈಗಾಗಲೇ ಮಾನ್ಯ ಸಚಿವರು ಹೇಳಿದಹಾಗೆ ಇದಕ್ಕೆ ಸಾಕಾದಷ್ಟು ಕಾಲಾವಕಾಶ ಬೇಕಾಗಿತ್ತು ; ಇದರ ಬಗ್ಗೆ ಹೆಚ್ಚು ಚರ್ಚೆಯಾಗಬೇಕಾಗಿತ್ತು. ಈ ಮಸೂದೆಯ ಒಂದು ಅಗತ್ಯತೆಯ ಬಗ್ಗೆ ನನ್ನ ವಿರೋಧವಿಲ್ಲ. ಇದು ನಮ್ಮ ರಾಷ್ಟ್ರದಲ್ಲಿ ಒಂದು ಭಾಗ. ಮತ್ತೊಂದು ಭಾಗ ಅಂದರೆ ಅತಿವೃಷ್ಟಿ, ಅನಾವೃಷ್ಟಿಯಾಗತಕ್ಕದ್ದರಲ್ಲಿ ಸಾಧ್ಯವಾದಷ್ಟು ನೀರಾವರಿ ವ್ಯವಸ್ಥೆಯನ್ನು ಮಾಡುವುದು. ಈಗಾಗಲೇ ಕೋಟ್ಯಾಂತರ ರೂಪಾಯಿಗಳ ಕೆಲಸಗಳನ್ನು ತೆಗೆದುಕೊಂಡಿದ್ದಾರೆ. ಈ ಕೆಲಸಗಳನ್ನು ಈಗಾಗಲೇ ಮಾಡಿದ್ದರೆ ಬಹಳ ಚೆನ್ನಾಗಿತ್ತು. ಈ ಮಸೂದೆಯ ಮೂಲಕ ನೀರಾವರಿ ವ್ಯವಸ್ಥೆಯನ್ನು ಒಂದು ಕ್ರಮಬದ್ಧವಾಗಿ ನಡೆಸಿಕೊಂಡು ಹೋಗತಕ್ಕಂಥಾದ್ದು ಮತ್ತು ಇರತಕ್ಕಂಥ ನೀರನ್ನು ಸಾಧ್ಯವಾದಷ್ಟು ಬಹಳ ಎಚ್ಚರಿಕೆಯಿಂದ ಉಪಯೋಗಿಸತಕ್ಕಂಥಾದ್ದು ಮತ್ತು ಯಾವ ಪ್ರದೇಶ ಈ ಸ್ಕೀಮಿಗೆ ಬರುತ್ತೋ ಅಲ್ಲಿ ಸಾಧ್ಯವಾದಷ್ಟು ಅಭಿವೃದ್ಧಿ ಮಾಡಬೇಕು. ಅದಕ್ಕೆ ಬೇಕಾದಷ್ಟು ಹಣಕಾಸನ್ನು ಬ್ಯಾಂಕುಗಳ ಮುಖಾಂತರ ತೆಗೆದುಕೊಳ್ಳುವುದಕ್ಕೆ ಏರ್ಪಾಟು ಮಾಡಿದ್ದೀರಿ. ಒಂದು ವಿಚಾರವನ್ನು ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನನ್ನ ಅನುಭವದಲ್ಲಿ ಹೇಳುವುದಾದರೆ, ಈ ಬೋರ್ಡ್ಸು, ಅಥಾರಿಟೀಸ್ ಎಂದು ಏನು ತಾವು ಮಾಡುತ್ತೀರೋ ಅವುಗಳು ಸರಿಯಾದ ರೀತಿಯಲ್ಲಿ ಕೆಲಸಮಾಡುತ್ತಿಲ್ಲ. ದುಬಾರಿಯಾದ ರೀತಿಯಲ್ಲಿ ನಡೆಯುತ್ತಾ ಇರತಕ್ಕಂಥಾದ್ದು ತಮಗೂ ಗೊತ್ತಿದೆ. ಅಂದೇ ಬಿ. ಡಬ್ಲ್ಯು. ಎಸ್. ಎಸ್. ಬಿ. ಮತ್ತಿತರ ಆರೇಳು ಸಂಸ್ಥೆಗಳು ಬಿಟ್ಟರೆ ಅನೇಕ ಕಾರ್ಪೊರೇಷನ್‌ಗಳಲ್ಲಿ ಖರ್ಚು ಜಾಸ್ತಿಯಾಗುತ್ತಿತ್ತು. ಇಂತಹ ಸಂಸ್ಥೆಗಳಲ್ಲಿ ಸಾಧ್ಯವಾದಷ್ಟು ಲಾಭ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ಹೊರತು ಸರಿಯಾಗಿ ಕೆಲಸಗಳನ್ನು ಮಾಡುವುದಿಲ್ಲ. ಬೋರ್ಡ್ಸು ಕಾನ್‌ಸ್ಟಿಟ್ಯೂಟ್ ಮಾಡುವಾಗ ಅರ್ಹತೆ ಇರಲಿ ಇಲ್ಲದಿರಲಿ ಇನ್‌ಫ್ಲ್ಯೂಯನ್ಸ್ ಮಾಡಲಿಕ್ಕೆ ಹೋಗುತ್ತಾರೆ. ಬೋರ್ಡ್ಸು, ಅಥಾರಿಟೀಸನ್ನು ಕಾನ್‌ಸ್ಟಿಟ್ಯೂಟ್ ಮಾಡುವಾಗ ರಾಜಕೀಯ ಮಾಡುವುದು ತಪ್ಪು. ಯಾರಿಗೆ ಸಾಕಷ್ಟು ಅನುಭವ ಇದೆ ಅಂಥ ವರನ್ನು ಅಥಾರಿಟೀಸ್‌ಗೆ, ಬೋರ್ಡ್‌ಗೆ ಹಾಕಿದರೆ ಸಾಕಾದಷ್ಟು ಪ್ರಯೋಜನವಾಗುತ್ತದೆಂದು ನೋಡಿ ತೆಗೆದುಕೊಳ್ಳಬೇಕು. ಛೇರ್‌ಮನ್ ಅಥವಾ ಸದಸ್ಯರು ರಾಜಕೀಯದಿಂದ ದೂರ ಇದು ಸಾಧ್ಯವಾದಷ್ಟು ಚೆನ್ನಾಗಿ ಕೆಲಸ ಮಾಡಿದರೆ ಬೋರ್ಡ್‌ಗಳನ್ನು ಮಾಡುವುದು ಅತೀ ಅವಶ್ಯಕವಾಗುತ್ತದೆ. ಈಗಾಗಲೇ ನಾವು ಅನೇಕ ಅಣೆಕಟ್ಟುಗಳನ್ನು ಕಟ್ಟಿದ್ದೇವೆ, ಅದರಿಂದ ಸಾಕಷ್ಟು ನೀರನ್ನು ಉಪಯೋಗಿಸುತ್ತಾ ಇಲ್ಲ. ಒಂದು ಕಡೆ ಆಗಬೇಕಾದ ಚಾನಲ್ಸ್ ಇನ್ನೂ ಆಗದೇ ಇರತಕ್ಕಂಥಾದ್ದು ಬಹಳ ವಿಷಾದಕರವಾದ ವಿಚಾರ. ಈಗ ಇದರಲ್ಲಿ ಲಿಫ್ಟ್ ಇರಿಗೇಷನ್ ಸ್ಕೀಂ ತೆಗೆದುಕೊಳ್ಳಬೇಕು ಎಂದು ಇದ್ದಾರೆ. ಲಿಫ್ಟ್ ಇರಿಗೇಷನ್ನೂ ಇದರಲ್ಲಿ ಸೇರಿಕೊಳ್ಳುತ್ತದೆ ಎಂದು ನಾನು ಯೋಚಿಸುತ್ತೇನೆ. ಈಗ ಇದನ್ನು ಅವಸರವಸರವಾಗಿ ತೆಗೆದುಕೊಂಡು ಬಂದಿರತಕ್ಕಂಥಾದ್ದು ಸೂಕ್ತವಲ್ಲದಿದ್ದರೂ ಕೂಡ ಅನುಭವದ ಮೇಲೆ ಅತೀ ಆಗತ್ಯವಾದ ತಿದ್ದುಪಡಿಗಳನ್ನು ತರಬೇಕಾದಂಥ ಅವಶ್ಯಕವಿರಬಹುದು. ಒಂದು ಬೋರ್ಡನ್ನು ಸ್ಥಾಪನೆ ಮಾಡುವಾಗ ರಾಜಕೀಯವಾಗಿ ಗಮನವಿಟ್ಟುಕೊಂಡು ಮಾಡಬೇಡಿ. ರಾಷ್ಟ್ರದ ಮತ್ತು ರಾಜ್ಯದ ಹಿತದೃಷ್ಟಿಯಿಂದ ಸರಿಯಾದವರನ್ನು ಅದಕ್ಕೆ ಹಾಕಿ.

ಎರಡನೆಯದಾಗಿ, ಈ ಬೋರ್ಡ್ಸು ಖರ್ಚು ವಿಪರೀತ ಜಾಸ್ತಿಯಾಗಿ, ಅದರ ಹೊರೆ ಕನ್‌ಸ್ಯೂಮರ್ಸ್‌ಮೇಲೆ ಜಾಸ್ತಿಯಾಗುತ್ತದೆ. ಎಲೆಕ್ಟ್ರಿಸಿಟಿ ಬೋರ್ಡ್, ವಾಟರ್‌ಸಪ್ಲೈ ಬೋರ್ಡ್, ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ ಆಗಲೀ ಅತಿ ಹೆಚ್ಚಿನ ರೀತಿಯಲ್ಲಿ ದುಬಾರಿ ಖರ್ಚು ಮಾಡುತ್ತಿದೆ. ಇದರ ಹೊರೆ ಗ್ರಾಹಕರ ಮೇಲೆ ಬೀಳುತ್ತದೆ. ಆದ್ದರಿಂದ ಈ ಬೋರ್ಡ್ಸ್‌ನಿಂದ ದುಬಾರಿ ಖರ್ಚು ಆಗದ ರೀತಿಯಲ್ಲಿ ಮಾಡಬೇಕು. ವಾಟರ್ ರೇಟ್ ಕೊಡುವುದಕ್ಕೆ ಕಷ್ಟವಾಗುತ್ತದೆ. ಆದರಲ್ಲಿ ಬ್ಯಾಂಕ್ ರೇಟಿನಲ್ಲಿ ಕೊಟ್ಟರೆ ಕಷ್ಟವಾಗುತ್ತದೆ. ಡಿ.ಐ.ಆರ್. ರೇಟ್ ಕೊಟ್ಟರೆ ಸರಿಹೋಗುತ್ತದೆ. ಇವರುಗಳು

ಬ್ಯಾಂಕ್ ರೇಟ್ ಪ್ರಕಾರ ತೆಗೆದುಕೊಂಡರೆ ಸಾಲ ತೀರಿಸುವುದಕ್ಕೆ ಆಗುವುದಿಲ್ಲ. ಆದಷ್ಟೂ ಕಡಿಮೆ ದರದಲ್ಲಿ ಇವರು ಸಾಲ ತೆಗೆದುಕೊಳ್ಳಬೇಕಾಗುತ್ತದೆ. ಆದುದರಿಂದ ಈ ಬಿಲ್ಲನ್ನು ಸ್ವಲ್ಪ ಸಾರ್ವಜನಿಕರ ಗಮನಕ್ಕೆ ತಂದಿದ್ದರೆ ಚೆನ್ನಾಗಿತ್ತು. ಸಂಬಂಧಪಟ್ಟ ರೂಲ್ಸನ್ನು ತರುವಾಗ ಸರಿಯಾದ ರೀತಿಯಲ್ಲಿ ಯೋಚನೆಮಾಡಿ ತರಬೇಕು. ಮತ್ತು ದುಬಾರಿ ರೇಟನ್ನು ಹಾಕಿದರೆ ಅನೇಕ ರೈತರಿಗೆ ವಾಟರ್ ಬಿಲ್ಲನ್ನು ಕಟ್ಟುವುದಕ್ಕಾಗುವುದಿಲ್ಲ. ಆದರ ಬಗ್ಗೆ ಸ್ವಲ್ಪ ಗಮನಕೊಟ್ಟು ಸಾಧ್ಯವಾದಷ್ಟು ಕೂಡ ಆ ಜಮೀನುಗಳಿಂದ ಉತ್ಪತ್ತಿ ಮಾಡುವುದಕ್ಕೆ ಯಾವ ಕಾರ್ಯಕ್ರಮ ಹಾಕಿಕೊಳ್ಳಬೇಕೋ ಅದನ್ನು ಹಾಕಿಕೊಂಡು, ಬೇಕಾದಂಥ ಪವರ್ ಆಗಲೀ, ಸಲಕರಣೆಗಳಾಗಲೀ, ಪೈಪ್‌ಗಳಾಗಲೀ ಸಾಧ್ಯವಾದಷ್ಟು ಎಚ್ಚರಿಕೆಯಿಂದ ಉಳಿತಾಯಮಾಡಿ, ಕಡಿಮೆ ದರದಲ್ಲಿ ನೀರನ್ನು ಒದಗಿಸದೇಹೋದರೆ ಪ್ರಯೋಜನವಾಗುವುದಿಲ್ಲ, ಅತ್ಯಂತ ಸುಲಭ ದರದಲ್ಲಿ ರೈತರಿಗೆ ನೀರನ್ನು ಒದಗಿಸತಕ್ಕಂಥ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಎಂದು ಹೇಳಿ, ಈ ಬಿಲ್ಲಿಗೆ ಒಪ್ಪಿಗೆ ಕೊಡಬೇಕಾಗಿದೆ, ಬೇಡ ಎಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಇದು ಅಷ್ಟು ಮುಖ್ಯವಾದ ಬಿಲ್ಲು ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಜಿ. ಬಸವಣ್ಣಪ್ಪ (ಹೊಳಿಹೊನ್ನೂರು).--ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಈ ಮಸೂದೆಯನ್ನು ಏನು ತಂದಿದ್ದಾರೆ, ಅದಕ್ಕಾಗಿ ನಾನು ಅವರನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಏಕೆಂದರೆ, It is a progressive legislation intented to ensure all round development of agriculture. ಕರ್ನಾಟಕದಲ್ಲಿ ಅನೇಕ ದೊಡ್ಡ ನೀರಾವರಿ ಯೋಜನೆಗಳಿವೆ. ಇದರಲ್ಲಿ ಕೋಟ್ಯಾಂತರ ರೂಪಾಯಿಗಳ ಬಂಡವಾಳವನ್ನು ಹೂಡಲಾಗಿದೆ. ಕೋಟ್ಯಾಂತರ ರೂಪಾಯಿಗಳ ಬಂಡವಾಳವನ್ನು ಹೂಡಿ ಆಚ್ಚುಕಟ್ಟಿನಲ್ಲಿ ಈಗ ಇರತಕ್ಕ ನೀರನ್ನು ಕ್ರಮಬದ್ಧವಾಗಿ ಉಪಯೋಗಿಸದೇ ಇದ್ದರೆ ಅದರ ಪತಿಫಲ ದೊರಕದ ಹಾಗೆ ಆಗುತ್ತದೆ. ಈ ಮಸೂದೆಯನ್ನು ತಂದಿರುವುದಕ್ಕಾಗಿ ನಾನು ಕರ್ನಾಟಕ ಸರ್ಕಾರವನ್ನು ಅಭಿನಂದಿಸಬೇಕಾಗಿದೆ. ಕಾವೇರಿ ಬೇಸಿನ್, ತುಂಗಭದ್ರ, ಕೃಷ್ಣ, ಘಟಪ್ರಭ ಮಲಪ್ರಭ ಮಾತ್ರ ಇದರ ವ್ಯಾಪ್ತಿಗೆ ಒಳಪಟ್ಟಂತೆ ಬಿಲ್ಲನ್ನು ತಂದಿದ್ದಾರೆ. ಇನ್ನೂ ಅನೇಕ ಮೇಜರ್ ಪ್ರಾಜೆಕ್ಟ್‌ಗಳಿವೆ.

೧–೩೦. ಪಿ. ಎಂ.

ನನ್ನ ಕ್ಷೇತ್ರದಲ್ಲಿ ಭದ್ರಾ ಪ್ರಾಜೆಕ್ಟ್ ಇದೆ ಈ ದೊಡ್ಡ ನೀರಾವರಿ ಯೋಜನೆಯು ಅಚ್ಚುಕಟ್ಟು ೩ ಲಕ್ಷ ಎಕರೆ ಇದು ೪ ಜಿಲ್ಲೆಯ ೮ ತಾಲ್ಲೂಕ್‌ಗಳಲ್ಲಿ ಈ ನೀರಿನ ಉಪಯೋಗವನ್ನು ಪಡೆಯುತ್ತಿದ್ದಾರೆ ಅಲ್ಲಿಯ ರೈತರು ನೀರಿನ ಉಪಯೋಗದ ಬಗ್ಗೆ ವೈಜ್ಞಾನಿಕವಾಗಿ ಉಪಯೋಗ ಮಾಡಿಕೊಳ್ಳುವ ಬಗ್ಗೆ ಮತ್ತು ಹಣದ ಸಹಾಯವನ್ನು ಪಡೆಯುವುದು ಅತಿ ಅವಶ್ಯಕವಿದೆ. ಆದರೆ ಭದ್ರಾ ಪ್ರಾಜೆಕ್ಟ್‌ನ್ನು ಈ ಬಿಲ್ಲಿನಲ್ಲಿ ಸೇರಿಸದೇ ಇರುವುದು ವಿಷಾದದ ಸಂಗತಿ ಇದನ್ನು ಸೇರಿಸುವ ಬಗ್ಗೆ ನಾನು ಮುಖ್ಯ ಮಂತ್ರಿಗಳವರಿಗೆ ೨೬–೬–೬೯ರಲ್ಲಿಯೇ ಒಂದು ಪತ್ರವನ್ನು ಬರೆದಿದ್ದೆ ಆಗ ಅವರು ಭದ್ರಾ ಪ್ರಾಜೆಕ್ಟ್‌ನ್ನು ಸೇರಿಸುವುದು ಸೂಕ್ತ ಎನ್ನುವ ಭರವಸೆ ಕೊಟ್ಟಿದ್ದರು. ಆದರೆ ಇವತ್ತು ಇದರಲ್ಲಿ ಕೇವಲ ತುಂಗಭದ್ರಾ, ಘಟಪ್ರಭಾ, ಮಲಪ್ರಭಾ, ಮತ್ತು ಕೃಷ್ಣಾ ಪ್ರಾಜೆಕ್ಟ್ ಈ ನಾಲ್ಕು ಪ್ರಾಜೆಕ್ಟ್‌ಗಳನ್ನು ಮಾತ್ರ ಕಾಡಾ ವ್ಯಾಪ್ತಿಯೊಳಗೆ ತರಲಾಗಿದೆ ಆದರೆ ಭದ್ರಾ ಪ್ರಾಜೆಕ್ಟ್‌ನ್ನು ಸೇರಿಸದೇ ಇರುವುದರಿಂದ ಮಾನ್ಯ ಮಂತ್ರಿಗಳವರು ಉತ್ತರ ಕೊಡುವಾಗ ಸಮಂಜಸವಾದ ಉತ್ತರವನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಈ ಮಸೂದೆಯಲ್ಲಿ ಅತಿ ಮುಖ್ಯವಾದ ವಿಷಯವೇನೆಂದರೆ ಕ್ಲಾಜ್ (೪)ರಲ್ಲಿ ಕಾಂಪೋಜಿಷನ್ ಆಫ್ ಆಥಾರಿಟಿ ಯಲ್ಲಿ ಎಲ್ಲಾ ಬರೀ ಟಾಪ್ ಲೆವಲ್ ಆಫೀಸರ್‌ಗಳನ್ನು ಹಾಕಿದ್ದೀರಿ, ಅದಕ್ಕೆ ನಾನು ತಮಗೆ ಸೂಚನೆ ಕೊಡುವುದೇನೆಂದರೆ, ಸರ್ಕಾರದ ಗುರುತರವಾದ ಕೆಲಸವಿರುವುದರಿಂದ ಮೀಟಿಂಗಿಗೆ ಬರುವುದಕ್ಕೆ ಕಷ್ಟವಾಗುತ್ತದೆ ಅದಕ್ಕೆ ಅವರ ಬದಲು ಅವರ ಸಬಾರ್ಡಿನೇಟ್ ಆಫೀಸರ್ಸ್ ಯಾರು ಇರುತ್ತಾರೆ ಉದಾಹರಣೆಗೆ ಡೆಪ್ಯೂಟಿ ಸೆಕ್ರಟರಿಗಳು ಅಂಥವರಿಗೆ ಅವಕಾಶ ಈ ಮಸೂದೆಯಲ್ಲಿ ಅಳವಡಿಸಬೇಕು ಅದೇ ರೀತಿ ಡೈರೆಕ್ಟರ್ ಆಫ್ ಅಗ್ರಿಕಲ್ಚರ್‌ರವರು ಬರುವುದಕ್ಕೆ ಆಗದಿದ್ದಾಗ ಜಾಯಿಂಟ್ ಡೈರೆಕ್ಟರ್‌ರವರೋ ಇಲ್ಲ ಡೆಪ್ಯೂಟಿ ಡೈರೆಕ್ಟರ್‌ರವರೋ ಹಾಜರಾಗುವುದಕ್ಕೆ ಅವಕಾಶವನ್ನಿಡುವುದು ಉತ್ತಮ. ಇಲ್ಲದಿದ್ದರೆ ಎಲ್ಲಾ ಟಾಪ್ ಆಫೀಸರ್‌ಗಳಿಗೆ ಸರ್ಕಾರದ ಹೆಚ್ಚಿನ ಕೆಲಸಗಳಿರುವಾಗ ಅವರು ಅಟೆಂಡ್ ಮಾಡುವುದಕ್ಕೆ ತೊಂದರೆಯಾಗುತ್ತದೆ. ಆದುದರಿಂದ ಕ್ಲಾಜ್(೪) ಏನಿದೆ ಅದಕ್ಕೆ ಸೂಕ್ತ ತಿದ್ದು

ಪಡಿ ಮಾಡಬೇಕೆಂದು ಮಾನ್ಯ ಮಂತ್ರಿಗಳವರಲ್ಲಿ ಕೇಳಿಕೊಳ್ಳುತ್ತೇನೆ. ಇದು ಬಹಳ ಪ್ರಗತಿಪರಾಯಕವಾದ ಮಸೂದೆಯಾಗಿರುವುದರಿಂದ ಇದಕ್ಕೆ ಸೂಕ್ತ ತಿದ್ದುಪಡಿಗಳೊಡನೆ ಮತ್ತು ಭದ್ರಾ ಪ್ರಾಜೆಕ್ಟ್‌ನ್ನೂ ಇದರಲ್ಲಿ ಸೇರಿಸಿ ಇದನ್ನು ಪಾಸ್ ಮಾಡುವುದು ಉತ್ತಮವೆಂದು ಹೇಳಿ ಇದನ್ನು ಸ್ವಾಗತಿಸುತ್ತಾ ನನ್ನ ಮಾತನ್ನ ಮುಗಿಸುತ್ತೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್ (ವಾರ್ತಾ ಮತ್ತು ಯುವಜನ ಸೇವಾ ಇಲಾಖೆ ಮಂತ್ರಿ).— ಮಾನ್ಯ ಅಧ್ಯಕ್ಷಣೀಯರೇ, ಶ್ರೀಮತಿ ಪ್ರಮೀಳಾರವರು ಎರಡು ಪ್ರಶ್ನೆ ಎತ್ತಿದ್ದಾರೆ; ಒಂದನೆಯದು ಸೆಕ್ಷನ್ ೩೦ರಲ್ಲಿ

> "The Authority may charge such fees as may be specified in the rules made under this Act, for rendering any service to any person."

ಅಂದರೆ ಇದು ವಾಟರ್ ರೇಟಿಗೆ ಸಂಬಂಧಪಟ್ಟದ್ದು ಅಲ್ಲ; ಅದರ ಅರ್ಥವೇನೆಂದರೆ, ಇವತ್ತು ಈ ಪ್ರಾಧಿಕಾರದ ಕಕ್ಷೆಯಲ್ಲಿ ಅನೇಕ ರೀತಿಯ ಸೇವಾ ವ್ಯವಸ್ಥೆಗಳು ಇರುತ್ತವೆ ವ್ಯಕ್ತಿಗತವಾಗಿ ಸೇವೆ ಮಾಡಿಕೊಡತಕ್ಕ ಕಾಲದಲ್ಲಿ ಅಂದರೆ, ಉದಾಹರಣೆಗೆ, ಟ್ರಾಕ್ಟರನ ಉಪಯೋಗ ಪಡೆದುಕೊಳ್ಳುವುದ ಕ್ಕೋಸ್ಕರವಾಗಿ ಕೇಳಿದರೆ ಅದಕ್ಕೆ ಬಾಡಿಗೆ ಫೀಜ್ ಅಂತ ಹಾಕಲಾಗುತ್ತದೆ, ಮತ್ತೆ ಇನ್ನು ಯಾವುದೇ ರೀತಿಯಾದ ಸೇವೆಯನ್ನು ಅಂದರೆ ತಜ್ಞರ ಸೇವೆಯನ್ನು ಒದಗಿಸಿ ಕೊಟ್ಟರೆ ಅದಕ್ಕೆ ಫೀಜ್ ಅಂತ ಹಾಕಂತ್ತೇವೆ ಅಷ್ಟೇ ಹೊರತು ವಾಟರ್ ರೇಟನ್ನು ವಸೂಲಿ ಮಾಡತಕ್ಕಂಥ ಪ್ರಶ್ನೆಯಲ್ಲ. ನಾವು ಇದಕ್ಕೆ ಸಂಬಂಧಪಟ್ಟ ರೂಲ್ಸ್‌ಗಳನ್ನು ಮಾಡಿದಾಗ ಅದರ ಬಗ್ಗೆ ಸ್ಪಷ್ಟ ಪಡಿಸುತ್ತೇನೆ. ಇನ್ನು ಎರಡನೆಯದು ಸೆಕ್ಷನ್ ೨೭ರಲ್ಲಿರುವುದನ್ನು ಅವರು ಸರಿಯಾಗಿ ಓದಿಲ್ಲವೆಂದು ಕಾಣುತ್ತದೆ ಅದನ್ನು ನಾನಂ ಸ್ಪಷ್ಟ ಪಡಿಸುತ್ತೇನೆ.

> "If water supplied through a field channel is used in any unauthorised manner, and if the person by whose act or negligence such use has occurred cannot be found after such enquiry as the Authority may deem sufficient, the Authority after giving not less than one month's notice to the holders nd occupiers of all lands benefitted thereby....."

ಅನ್‌ಆಥರೈಜ್ಡ್ ಆಗಿ ನೀರನ್ನು ಉಪಯೋಗ ಮಾಡಿಕೊಳ್ಳುತ್ತಿದ್ದರೆ ಅವರಿಂದಲೇ ವಸೂಲಿ ಮಾಡುತ್ತೇವೆಂದು ಹೇಳಿದ್ದೇವೆ ಅಷ್ಟೇ. ಇನ್ನು ಮಾನ್ಯ ಸದಸ್ಯರಾದ ಶ್ರೀ ಜಿ. ಬಸವಣಪ್ಪನವರು ಎರಡು ಪ್ರಾಮುಖ್ಯವಾದ ಪ್ರಶ್ನೆಗಳನ್ನು ಇಟ್ಟಿದ್ದಾರೆ. ಒಂದನೆಯದು ಏನೆಂದರೆ ಇದರಲ್ಲಿ ಭದ್ರಾ ಪ್ರಾಜೆಕ್ಟ್‌ನ್ನು ಸೇರಿಸಲ್ಲ ಎನ್ನುವುದು. ಅಧ್ಯಕ್ಷಣೀಯರೇ ಇದರಲ್ಲಿ ಭದ್ರಾ ಪ್ರಾಜೆಕ್ಟ್, ಅಥವಾ ಇನ್ನಾವ ಪ್ರಾಜೆಕ್ಟ್‌ನ ಪ್ರಶ್ನೆ ಇದರೊಳಗೆ ಇಲ್ಲ. ನಾವು ಹಿಂದೆ ಆಡಳಿತಾತ್ಮಕ ದೃಷ್ಟಿಯಿಂದ, ಈ ಡೆವಲಪ್‌ಮೆಂಟ್ ಅಥಾರಿಟಿಯನ್ನು ಮಾಡುವಾಗ ಈ ನಾಲ್ಕು ಪ್ರಾಜೆಕ್ಟ್‌ಗಳ ಹೆಸರುಗಳನ್ನು ಮಾತ್ರ ಮಾಡಿದ್ದೆವು, ಈಗ ಇದರಿಂದ ಏನಾಗಿದೆ ಎಂದರೆ, ಕಮ್ಯಾಂಡ್ ಏರಿಯಾ ಅಂತ ಅಂದರೆ ಅದಕ್ಕೆ ವಿವರಣೆಯನ್ನು ಕೊಟ್ಟಿದ್ದೇವೆ,

> "As soon as may be after the commencement of this Act, the State Government may, by notification, constitute an Authority for the development of each Command Area."

ಅಂದರೆ ಯಾವುದೇ ಒಂದು ಕಮ್ಯಾಂಡ್ ಏರಿಯಾವನ್ನು ನಿರ್ಮಾಣ ಮಾಡುವುದಕ್ಕೆ ಈ ಬಿಲ್ಲಿನಿಂದ ಸರ್ಕಾರಕ್ಕೆ ಅಧಿಕಾರವಿದೆ. ಇದು ಅಧಿಕಾರ ಬರುವುದು ಕೇವಲ ಈ ೪ ಪ್ರಾಜೆಕ್ಟ್‌ಗಳಿಗೆ ಮಾತ್ರ ಅಂತ ಅಲ್ಲ, ಈ ಬಿಲ್ಲನ್ನು ಪಾಸ್ ಮಾಡುವುದರಿಂದ ನಮಗೆ ಹೊಸಡಾಗಿ ಡೆವಲಪ್‌ಮೆಂಟ್ ಅಥಾರಿಟಿ ಮಾಡುವುದಕ್ಕೆ ಸಂಪೂರ್ಣ ಅಧಿಕಾರವಿರುತ್ತದೆ. ಆದುದರಿಂದ ಸರ್ಕಾರದವರಿಂದ ಯಾವ ಲ್ಯಾಪ್ಸ್ ಆಗಿಲ್ಲ, ಇದ

ರಿಂದ ಸಂಪೂರ್ಣ ಅಧಿಕಾರ ಸರ್ಕಾರಕ್ಕೆ ಬರುವುದರಿಂದ ಮಾನ್ಯ ಸದಸ್ಯರ ಸಲಹೆಯನ್ನು ಗಮನದಲ್ಲಿಟ್ಟು ಕೊಂಡು ಈಗಾಗಲೇ ನಾವು ಭದ್ರಾ ಪ್ರಾಜೆಕ್ಟ್‌ನ್ನೂ ಕೂಡ ಈ ಅಥಾರಿಟಿಯೊಳಗೆ ಮಾಡಬೇಕೆಂದು ಕುತೂಹಲಗಳಾಗಿದ್ದೇವೆ. ಇದರಿಂದ ಸದಸ್ಯರು ಯಾವುದೇ ರೀತಿಯಾದ ಕಳವಳವನ್ನು ಪಡುವ ಅವಶ್ಯಕತೆ ಇಲ್ಲ.

ಇನ್ನು ಮಾನ್ಯ ಸದಸ್ಯರು ಮಾತನಾಡುತ್ತಾ ನಾವು ಇದರಲ್ಲಿ ಬರೀ ಟಾಪ್ ಲೆವಲ್ ಅಥಾರಿಟಿಗಳನ್ನು ಹಾಕಿದ್ದೇವೆಂದು ಹೇಳಿದರು ಆದರೆ ನಾವೇ ಉದ್ದೇಶಪೂರ್ವಕವಾಗಿ ಹಾಕಿದ್ದೇವೆ. ಏತಕ್ಕೆಂದರೆ ಸರ್ಕಾರದ ಪರವಾಗಿ ಆಗಬೇಕಾದಂತಹ ಎಷ್ಟೋ ಕೆಲಸಗಳ ಪಾಲಿಸಿಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ ಆಗ ಅವರೆಲ್ಲಾ ಬರಲೇ ಬೇಕಾಗುತ್ತದೆ ಆದರೂ ಕೂಡ ಮಾನ್ಯ ಸದಸ್ಯರು ಹೇಳಿದ ಹಾಗೆ ಒಂದು ವೇಳೆ ಯಾರಿಗಾದರೂ ಬರುವುದಕ್ಕೆ ಆಗದಿದ್ದರೆ ಅದಕ್ಕೆ ಬೇರೆ ಸೂಕ್ತವಾದ ವ್ಯವಸ್ಥೆಯನ್ನು ಸಹ ಮಾಡಿದ್ದೇವೆ. ಕ್ಲಾಜ್ (೯) ರಲ್ಲಿ ಈ ರೀತಿಯಾಗಿದೆ.

> "If any member, being the Vice-Chancellor of the Agricultural University, or an officer of the State Government, is unable to attend any meeting of the Authority, he may under intimation to the Chairman, authorise his immediate subordinate officer in writing, to do so."

ಹೀಗೆ ಏತಕ್ಕೆ ಹಾಕಿದ್ದೇವೆ ಎಂದರೆ ಉದಾಹರಣೆಗೆ ಚೀಫ್ ಇಂಜಿನಿಯರ್‌ರವರ ಬದಲು ಒಬ್ಬ ಅಸಿಸ್ಟೆಂಟ್ ಇಂಜಿನಿಯರ್‌ರವರನ್ನೋ ಮತ್ತೊಬ್ಬರನ್ನೊ ಮೀಟಿಂಗ್‌ಗೆ ಕಳುಹಿಸಿ ಬಿಡಬಹುದು, ಆಗ ಅವರು ಬಂದು ಪಾಲಿಸಿ ಮ್ಯಾಟರ್‌ಗಳಂಥವುಗಳಲ್ಲಿ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ, ಅದಕ್ಕೆ ಪುನಃ ಅವರು ನಮ್ಮ ಚೀಫ್ ಇಂಜಿನಿಯರ್‌ರವರನ್ನು ಕೇಳಿಕೊಂಡು ಬರುತ್ತೇನೆ ಅಂತ ಹೋದರೆ ಪುನಃ ಮೀಟಿಂಗ್ ಕರೆಯುವುದಕ್ಕೆ ಆಗುವುದಿಲ್ಲ, ಆ ದೃಷ್ಟಿಯಿಂದ ನಾವು ಇದನ್ನೆಲ್ಲಾ ಸಾಕಷ್ಟು ಕೂಲಂಕಷವಾಗಿ ವಿಮರ್ಶೆ ಮಾಡಿಯೇ ಆ ರೀತಿ ಹಾಕಿದ್ದೇವೆ ಇದರೊಳಗೆ ಇನ್ನು ಅಲ್ಪ ಸ್ವಲ್ಪ ಲೋಪ ದೋಷಗಳಿರಬಹುದು, ಆ ರೀತಿ ಲೋಪ ದೋಷಗಳಿವೆ ಎಂದು ಕಂಡು ಬಂದಾಗ ಅವುಗಳನ್ನೆಲ್ಲಾ ಸರಿಪಡಿಸುತ್ತೇವೆ ಎನ್ನುವ ತಕ್ಕ ಭರವಸೆಯನ್ನು ಈಗಾಗಲೇ ಕೊಟ್ಟಿದ್ದೇವೆ. ಮಾನ್ಯ ಶ್ರೀ ಶಾಮಣ್ಣನವರು ಮಾತನಾಡುತ್ತಾ ನೀವು ಬೋರ್ಡ್ ಅಥಾರಿಟಿಯನ್ನು ನೇಮಕ ಮಾಡುವಾಗ ಅದರಲ್ಲಿ ಸರಿಯಾದ ಜನಗಳನ್ನು ಹಾಕುವುದಿಲ್ಲವೆಂದು ಹೇಳಿದರು ಅದಕ್ಕೆ ನಾವು ಆದಷ್ಟು ನೋಡಿಯೇ ಸರಿಯಾದ ವ್ಯಕ್ತಿಗಳನ್ನು ಹಾಕುತ್ತೇವೆ. ಆದರೆ ರಾಜಕೀಯ ವ್ಯಕ್ತಿಗಳನ್ನೇ ಆದರಲ್ಲಿ ಹಾಕಬಾರದು, ಅವರುಗಳು ಇರಬಾರದು ಅಂತ ಹೇಳಿದರೆ ಅದು ಯಾವುದೋ ಒಂದು ಹಳೆಯ ಕಲ್ಪನೆಯಾಯಿತು. ಇವತ್ತು ರಾಜಕೀಯ ಎಂದರೆ ಜನಗಳ ಅಭಿಪ್ರಾಯ ಅಭಿಮತವನ್ನು ಹೊಂದಿಕೊಂಡೇ ರಾಜಕೀಯವಿರುತ್ತದೆ. ಆದುದರಿಂದ ಆದಷ್ಟು ಸಮರ್ಥರಾಗಿರತಕ್ಕವರನ್ನು ನೋಡಿ ಅದರಲ್ಲಿ ಹಾಕುವುದಕ್ಕೆ ಪ್ರಯತ್ನ ಮಾಡುತ್ತೇವೆ. ಆದುದರಿಂದ ಮಾನ್ಯ ಸದಸ್ಯರುಗಳು ತಿಳಿಸಿರತಕ್ಕಂಥ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡೇ ರೂಲ್ಸ್ ಮಾಡುತ್ತೇವೆ.

ಮತ್ತೆ ಏನಾದರೂ ತಿದ್ದುಪಡಿ ಮಾಡಬೇಕಾದರೆ ತಾವು ಹೇಳಿದಂತಹ ಅಭಿಪ್ರಾಯವನ್ನು ಗಮನದಲ್ಲಿಟ್ಟುಕೊಂಡು ಮಾಡುತ್ತೇವೆಂದು ತಿಳಿಸುತ್ತಾ ಈ ವಿಧೇಯಕಕ್ಕೆ ಮಂಜೂರಾತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

MADAM DEPUTY SPEAKER.—The question is :

"That the Karnataka Command Areas Development Bill, 1979 be taken into consideration.

*The Motion was adopted*

## CLAUSE BY CLAUSE CONSIDERATION

### CLAUSES 2 to 6

MADAM DEPUTY SPEAKER—The question is :

"That clauses 2 to 6 both inclusive, do stand part of the Bill."

*The Motion was adopted*

Clauses 2 to 6 both inclusive were added to the Bill.

### CLAUSE 7.

MADAM DEPUTY SPEAKER.—There is an amendment to clause 7 given notice of by Sri Manik Rao Patil. He may move the amendment.

SRI MANIK RAO PATIL.—I beg to move :

"That at page 8, delete subclause (b) of clause 7
That at page 8. delete sub-clause (d) of clause 7."

*The question was proposed.*

ಶ್ರೀ ಮಾಣಿಕರಾವ್ ಪಾಟೀಲ್. —ಇದರ ಕಾರಣ ಇಷ್ಟೆ ಬಹುಶಃ ಯಾವುದೇ ಕಮಿಟಿಗೇ ಆಗಲಿ ಒಬ್ಬ ವ್ಯಕ್ತಿಯನ್ನು ನೇಮಕ ಮಾಡಬೇಕಾದರೆ ಸರ್ಕಾರ ಸಾಕಷ್ಟು ಯೋಚನೆ ಮಾಡಿ ಆತ ಸದಸ್ಯನಾಗಲಿಕ್ಕೆ ಯೋಗ್ಯನಾಗಿದ್ದಾನೆಯೇ ಇಲ್ಲವೇ ಎಂಬುದನ್ನು ನೋಡಿಕೊಂಡು ಮಾಡಬೇಕು. ಬಹುಶಃ ಈ ಸಬ್ ಸೆಕ್ಷನ್ನಿಗೆ ಒಪ್ಪಿಗೆ ಕೊಟ್ಟರೆ ಸರ್ಕಾರಕ್ಕೆ ರಾಜಕೀಯ ಮಾಡತಕ್ಕ ಸಂದರ್ಭ ಸಿಗುತ್ತದೆ ಈಗ ನಾವು ನೋಡುತ್ತಿರುವ ಹಾಗೆ ಇಡೀ ಕರ್ನಾಟಕದಲ್ಲಿರತಕ್ಕ ಭೂ ನ್ಯಾಯ ಮಂಡಲಿಗಳಲ್ಲಿ ನಿನ್ನೆ ಇದ್ದ ವ್ಯಕ್ತಿ ಇವತ್ತು ಇರುವುದಿಲ್ಲ, ನಾಳೆ ಮತ್ತೊಬ್ಬ ನೇಮಕಗೊಂಡಿರುತ್ತಾನೆ. ಈ ರೀತಿ ನೇಮಕ ಮಾಡತಕ್ಕ ಅಧಿಕಾರ ಸರ್ಕಾರದ ಹತ್ತಿರ ಇರಬಾರದು. ಆದ್ದರಿಂದ, ಯೋಗ್ಯತೆ ನೋಡಿ ಒಬ್ಬನನ್ನು ನೇಮಕಮಾಡಬೇಕೆಂದು ತಿದ್ದುಪಡಿ ತಂದಿದ್ದೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಯಾವುದೇ ರೀತಿಯ ಅಥಾರಿಟಿಯನ್ನು ಮಾಡಬೇಕಾದರೂ ಕೂಡ ಸರ್ಕಾರಕ್ಕೆ ಆ ಬಗ್ಗೆ ಸಂಪೂರ್ಣವಾದ ಅಧಿಕಾರ ಇರಬೇಕಾದುದು ಅತ್ಯಗತ್ಯವಾಗಿದೆ. ನಾನು ಅವರಿಗೆ ಭರವಸೆ ಕೊಡಬಲ್ಲೆ ; ಈ ರೀತಿಯಲ್ಲಿ ಅದನ್ನು ದುರುಪಯೋಗ ಮಾಡಿಕೊಳ್ಳತಕ್ಕದ್ದು ಸರ್ಕಾರದ ಇಚ್ಛೆಯಲ್ಲ ಎಂದು. ಸರ್ಕಾರವನ್ನು ಯಾರೇ ನಡೆಸುತ್ತಿರಲಿ ಸರ್ಕಾರವನ್ನು ಹೆಲ್ಪ್‌ಲೆಸ್ ಪರಿಸ್ಥಿತಿಗೆ ತೆಗೆದುಕೊಂಡು ಹೋಗುವ ರೀತಿಯಲ್ಲಿ ಮಾಡಬಾರದು ; ವ್ಯಾಪ್ತಿಗೆ ಮೀರಿ ಬಳಸಬಾರದು ಎಂಬ ಬಗ್ಗೆ ಒಪ್ಪಿಗೆ ಇದೆ. ಇಷ್ಟು ಅಧಿಕಾರ ಸರ್ಕಾರಕ್ಕೆ ಅಗತ್ಯ ಎಂದು ಕಂಡುಬಂದಿರುವುದರಿಂದ ಸೂಚಿಸಿದ್ದೇನೆ. ಆದಕಾರಣ ಮಾನ್ಯ ಸದಸ್ಯರ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲವೆಂದು ಸ್ಪಷ್ಟಪಡಿಸುತ್ತೇನೆ.

SRI MANIK RAO PATEL.—I do not press my amendment.

MADAM DEPUTY SPEAKER.—Has the hon. member leave of the house to withdraw his amendment ?

MEMBERS. —Yes.

*The amendment was, by leave of the house, withdrawn.*

MADAM DEPUTY SPEAKER.—The question is :

"That clause 7 do stand part of the Bill."

*The Motion was adopted*

Clause 7 was added to the Bill.

CLAUSES 8 to 15

MADAM DEPUTY SPEAKER.—The question is :

"That clauses 8 to 15 both inclusives do stand part of the Bill."

*The motion was adopted*

Clauses 8 to 15 both inclusive were added to the Bill.

CLAUSE 16 :

MADAM DEPUTY SPEAKER.—There is an amendment.

SMT. RENUKA RAJENDRAN.—I do not propose to move my amendment.

MADAM DEPUTY SPEAKER.—The question is :

"That clause 16 do stand part of the Bill."

*The motion was adopted*

Clause 16 was added to the Bill.

CLAUSE 17 to 51

MADAM DEPUTY SPEAKER.—The question is :

"That clauses 17 to 51 both inclusive do stand part of the Bill."

*The motion was adopted*

[Clauses 17 to 51 both inclusive were added to the Bill.]

CLAUSE 1, etc.

MADAM DEPUTY SPEAKER.—The question is :

"That Clause 1, the Long Title the Preamble and the Enacting Formula do stand part of the Bill."

*The Motion was adopted*

[Clause 1 the long Title, the Preamble and the Enacting Formula were added to the Bill.]

## MOTION TO PASS

SRI K.H. SRINIVAS (Minister for Electricity and Youth Services)—Sir, I beg to move :

"That the Karnataka Command Areas Development Bill, 1979 be passed."

MADAM DEPUTY SPEAKER.—The question is :

"That the Karnataka Command Areas Development Bill, 1979 be passed."

*The motion was adopted and the Bill was passed.*

SRI K. H. RANGANATH (Minister for Agriculture on behalf of Chief Minister).—Sir, I move :

"That the Motor Vehicles (Karnataka amendment) Bill, 1979 as passed by the Legislative Council be taken into consideration."

*The question was proposed*

ಶ್ರೀ ಕೆ. ಎಚ್. ರಂಗನಾಥ್.—ಇದರಲ್ಲಿ ಹೆಚ್ಚು ವಾದಗ್ರಸ್ಥವಾದ ವಿಚಾರ ಏನು ಇಲ್ಲ ; ಬೆಂಗಳೂರು ಸಿಟಿಗೆ ಒಂದು ರೀಜನಲ್ ಟ್ರಾನ್ಸ್‌ಪೋರ್ಟ್ ಅಥಾರಿಟಿಯನ್ನು ಮಾಡತಕ್ಕದ್ದು ಅಷ್ಟೆ. ಮುಂಚೆ ಇದ್ದ ಹಾಗೆ ಇಡೀ ಬೆಂಗಳೂರಿಗೆ ಒಂದೇ ರೀಜನಲ್ ಟ್ರಾನ್ಸ್‌ಪೋರ್ಟ್ ಅಥಾರಿಟಿ ಇರಬೇಕೆಂಬ ಅಭಿಪ್ರಾಯ ಕಂಡು ಬಂದದ್ದರಿಂದ ಈ ತಿದ್ದುಪಡಿಯನ್ನು ತರಲಾಗಿದೆ. ಬಾಕಿ ತಿದ್ದುಪಡಿಗಳಲ್ಲಿ ಒಂದೆರಡು ಕಾನ್‌ಸಿಕ್ವೆನ್ಷಿಯಲ್ ಚೇಂಜಸ್ ಇವೆ. ಇದಕ್ಕೆ ಮಾನ್ಯ ಸಭೆ ಒಪ್ಪಿಗೆ ಕೊಡಬೇಕೆಂದು ನಾನು ಈ ತಿದ್ದುಪಡಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಶ್ರೀ ಟಿ. ಆರ್. ಶಾಮಣ್ಣ.—ಸಿಂಗಲ್ ಅಥಾರಿಟಿ ಮಾಡಬೇಕೆಂದು ಮಾಡಿದ್ದೀರಿ. ಆದರೆ ಟ್ರಾನ್ಸ್‌ಪೋರ್ಟಿಗೆ ಒಂದು ಸರಿಯಾದ ಆಫೀಸನ್ನು ಇನ್ನೂ ಮಾಡಿಲ್ಲ. ಇದರ ಅವಶ್ಯಕತೆ ಬಹಳವಾಗಿರುವುದರಿಂದ ಅದನ್ನೂ ಮತ್ತು ಅಲ್ಲಿ ಲಂಚ ತೆಗೆದುಕೊಳ್ಳುವುದನ್ನು ಕಡಿಮೆ ಮಾಡಿದರೆ ಒಳ್ಳೆಯದು.

ಶ್ರೀಮತಿ ಎಸ್. ಪ್ರಮೀಳ.—ಟ್ರಾನ್ಸ್‌ಫರ್ ಆದ ಆರ್.ಟಿ.ಓ. ಶ್ರೀ ವೆಂಕಟಪ್ಪಯ್ಯನವರನ್ನು ಪುನಃ ಇದೇ ಬೆಂಗಳೂರಿಗೆ ತಂದು ಹಾಕಿದ್ದೀರಿ. ಈ ರೀತಿ ಮಾಡುವುದರಿಂದ ಏನು ತಿದ್ದುಪಡಿಗಳನ್ನು ತಂದರೂ ಅನುಕೂಲವಾಗುವುದಿಲ್ಲ. ಆದ್ದರಿಂದ, ದಯವಿಟ್ಟು ಇದನ್ನು ತಾವು ನೋಡಬೇಕು.

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಶಾಮಣ್ಣನವರು ಏನು ಅಭಿಪ್ರಾಯ ಹೇಳಿದ್ದಾರೆ ಅದನ್ನು ಗಮನದಲ್ಲಿಟ್ಟುಕೊಳ್ಳೋಣ. ಮಾನ್ಯ ಸದಸ್ಯರು ಒಂದನ್ನು ಮಾತ್ರ ಹೇಳಿದ್ದಾರೆ ಅಂದರೆ ಲಂಚ ತೆಗೆದುಕೊಳ್ಳುವವರ ಮೇಲೆ ಹೇಳಿದ್ದಾರೆ. ಆದರೆ ಕೊಡುವವರಿಗೂ ಕೂಡ ಮಾನ್ಯ ಶಾಮಣ್ಣನವರು ಬಹಿರಂಗ ಸಭೆಗಳಲ್ಲಿ ಭಾಷಣ ಮಾಡುವಾಗ ಹೇಳಬೇಕು. ಮಾನ್ಯ ಶಾಮಣ್ಣನವರ ಭಾಷಣ ಅಂದರೆ ಹೆಚ್ಚು ಜನರು ಕೇಳುತ್ತಾರೆ. ಕೊಡುವವರಿಗೆ ಕೊಡಬೇಡಿ ಎಂದು ಹೇಳುತ್ತಾ ಹೋದರೆ ಬಹಳ ಅನುಕೂಲವಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ತಾವು ಭಾಷಣ ಮಾಡಿದರೂ ಜನ ಬಂದು ಕೇಳುತ್ತಾರೆ.

ಶ್ರೀಮತಿ ಎಸ್. ಪ್ರಮೀಳ.—ಕೊಡದಿದ್ದರೆ ಕೆಲಸವಾಗುವುದಿಲ್ಲವಲ್ಲ ಆಡಕ್ಕೆ ಏನು ಮಾಡುವುದು ?

ಶ್ರೀ ಟಿ. ಆರ್. ಶಾಮಣ್ಣ.—ಸ್ವಾಮಿ, ತಾವು ಅವರಿಗೆ ಬೇಕಾದ ಪರ್ಮಿಟ್‌ಗಳು, ಲೈಸೆನ್ಸ್‌ನ್ನು ಸಕಾಲದಲ್ಲಿ ಒದಗಿಸಿಕೊಟ್ಟರೆ ಆಗ ಲಂಚ ತೆಗೆದುಕೊಳ್ಳತಕ್ಕಂಥಾದ್ದು ಇರುವುದಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಇದನ್ನು ನಾನು ಗಮನದಲ್ಲಿಟ್ಟುಕೊಳ್ಳುತ್ತೇನೆ. ಈಗ ಮಾನ್ಯ ಸದಸ್ಯರೆಲ್ಲರೂ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ರಾಮಪ್ಪ.—ಮಾನ್ಯ ಮಂತ್ರಿಯವರು ಈ ಲಂಚವನ್ನು ತೆಗೆದುಕೊಳ್ಳತಕ್ಕದ್ದನ್ನು ಕಡಿಮೆ ಮಾಡುತ್ತೇವೆ ಎಂದು ಒಂದು ಆಶ್ವಾಸನೆಯನ್ನು ಈ ಸಭೆಗೆ ಕೊಡಲಿ.

ಒಬ್ಬ ಮಾನ್ಯ ಸದಸ್ಯರು.—ಅದನ್ನು ಕೊಡುವುದಕ್ಕಾಗುವುದಿಲ್ಲ ;